REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 6 | MARCH - 2026

# ಮಾನವ ಹಕ್ಕುಗಳ ಅರಿವು ಮತ್ತು ಜಾಗೃತಿ–ಶೈಕ್ಷಣಿಕ ಸಂಸ್ಥೆಗಳ ಪಾತ್ರ

ಡಾ. ಶಿವಾಜಿ ರಾಮಚಂದ್ರ ಕಟ್ಟಿ,
ಪ್ರಾಂಶುಪಾಲರು, ಶ್ರೀ ರಾಜ ರಾಜೇಶ್ವರಿ ಪ್ರಥಮ ದರ್ಜೆ ಕಾಲೇಜು, ಜಗಳೂರು, ದಾವಣಗೆರೆ ಜಿಲ್ಲೆ, ಕರ್ನಾಟಕ.

**ಪೂರ್ವ ಪೀಠಿಕೆ**

ಪ್ರಸ್ತುತ ಸಂಶೋಧನಾ ಲೇಖನದಲಿ ಮಾನವ ಹಕ್ಕುಗಳ ಅರಿವು ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶೈಕ್ಷಣಿಕ ಸಂಸ್ಥೆಗಳ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ. ಮಾನವ ಹಕ್ಕುಗಳು ಇಂದು ಜಾಗತಿಕವಾಗಿ ಚರ್ಚಿತವಾಗುವ ಪ್ರಮುಖ ವಿಷಯಗಳಲ್ಲಿ ಒಂದಾಗಿದೆ. ದಿನಂಪ್ರತಿ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳು ಹೆಚ್ಚುತ್ತಿವೆ. ಕರ್ನಾಟಕ ಸರ್ಕಾರವು ಶಾಲಾ–ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಮಾನವ ಹಕ್ಕುಗಳು ಕುರಿತು ಪ್ರಾಥಮಿಕ ಮಾಹಿತಿ ನೀಡಲು ಪಠ್ಯ ಕ್ರಮಗಳ ಅಳವಡಿಕೆಯನ್ನು ಹೆಚ್ಚು ವ್ಯಾಪಕ ಗೊಳಿಸುವ ಹಲವಾರು ದಿಟ್ಟ ಕ್ರಮಗಳನ್ನು ಕೈಗೊಂಡಿವೆ. ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು ಈ ಕುರಿತು ಇನ್ನೂ ಹೆಚ್ಚು ಜಾಗೃತಿಯನ್ನು ಪ್ರದರ್ಶಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಕಲಿಕೆಯ ಹಂತದಲ್ಲಿಯೆ ಮಾನವ ಹಕ್ಕುಗಳ ಕುರಿತು ಸಂಪೂರ್ಣ ಮಾಹಿತಿ ದೊರೆಯುವಂತಹ ಎಂದು ವಿಶೇಷ ಕೋರ್ಸುಗಳನ್ನು ಪ್ರಾರಂಭಿಸಿವೆ. ಕರ್ನಾಟಕದಲ್ಲಿ ಮಾನವ ಹಕ್ಕುಗಳ ರಕ್ಷಣೆಗಾಗಿಯೇ ಇರುವ ಕೆಲವು ಸರ್ಕಾರೇತರ ಸಂಘ ಸಂಸ್ಥೆಗಳು ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟಲು ಬಹಳಷ್ಟು ಸಮಾಜ ಮುಖಿ ಕೆಲಸಗಳನ್ನು ಮಾಡುತ್ತಿವೆ. ಆದರೆ ಮಾನವ ಹಕ್ಕುಗಳ ಬಗ್ಗೆ ಅರಿಯುವುದು ಮತ್ತು ಪುಸ್ತಕ ಮುಖೇನ ತಿಳಿದು ಕೊಳ್ಳುವುದಕ್ಕಿಂತ ಪಠ್ಯೇತರ ಕಾರ್ಯ ಚಟುವಟಿಕೆಗಳ ಮೂಲಕ ಮಾನವ ಹಕ್ಕುಗಳ ಉಲ್ಲಂಘನೆ ತಡೆಯುವುದು ಮುಖ್ಯ. ಎಲ್ಲಾ ಶಿಕ್ಷಣ ಸಂಸ್ಥೆಗಳು ಮಾನವ ಹಕ್ಕುಗಳ ವಿವಿಧ ಆಯಾಮಗಳ ಉಲ್ಲಂಘನೆ, ತಡೆ ಮತ್ತು ಸಂರಕ್ಷಣೆ ಕುರಿತು ಜಾಗೃತಿ ವಹಿಸಿ ಏಕ ರೂಪವಾಗಿ ಸಂರಕ್ಷಣಾ ನೀತಿಯನ್ನು ಅನುಸರಿಸುವಂತಾಗ ಬೇಕು ಎಂಬ ಕಳಕಳಿ ಸಾಮಾನ್ಯವಾಗಿ ಎಲ್ಲೆಡೆ ಕೇಳಿ ಬರುತ್ತಿದೆ. ಹೆಚ್ಚುತ್ತಿರುವ ಶಾಲಾ ಮಟ್ಟದ ಲೈಂಗಿಕ ಶೋಷಣೆ ಪ್ರಕರಣಗಳು ಶಿಕ್ಷಣ ಸಂಸ್ಥೆಗಳ ಸಾಂಸ್ಥಿಕ ಹೊಣೆಗಾರಿಕೆಯ ನಿರ್ಲಕ್ಷಕ್ಕೆ ಸಾಕ್ಷಿಯಾಗಿವೆ. ಈ ನಿಟ್ಟಿನಲ್ಲಿ ಮಾನವ ಹಕ್ಕುಗಳ ಸಂರಕ್ಷಣೆ ಕುರಿತು ಶೈಕ್ಷಣಿಕ ಸಂಸ್ಥೆಗಳ ಸಾಂಸ್ಥಿಕ ಜವಾಬ್ದಾರಿಯನ್ನು ನಿರ್ವಹಿಸುವ ಪ್ರತ್ಯೇಕ ಮಾನದಂಡಗಳು ಅವಶ್ಯಕತೆ ಇದೆ. ಶಾಲಾ ಹಂತದಲ್ಲಿಯೇ ಮಾನವ ಹಕ್ಕುಗಳ ಸಂರಕ್ಷಣಾ ಸಮಿತಿಯನ್ನು ರಚಿಸುವುದೂ ಕುರಿತಂತೆ ಶೈಕ್ಷಣಿಕ ಸಂಸ್ಥೆಗಳ ಬಹು ಮುಖಿ ಆಯಾಮಗಳು ಅನಾವರಣ ಗೊಳ್ಳಬೇಕಿದೆ.




**ಕೀಲಿ ಪದಗಳು:** ಮಾನವ ಹಕ್ಕುಗಳು, ಅರಿವು ಮತ್ತು ಜಾಗೃತಿ, ಶೈಕ್ಷಣಿಕ ಸಂಸ್ಥೆಗಳ ಪಾತ್ರ.

**ಪೀಠಿಕೆ:**

ಮಾನವ ತಾನು ಮನುಷ್ಯನಾಗಿರುವ ಕಾರಣದಿಂದ ಅನುಭವಿಸುವ ಸೌಲಭ್ಯಗಳು ಮತ್ತು ಹಕ್ಕುಗಳನ್ನು ಮಾನವ ಹಕ್ಕುಗಳು ಎಂದು ಕರೆಯಲಾಗಿದೆ. ಇದು ಮೂಲತಃ ಮಾನವ ಬದುಕಿನ ಹಕ್ಕುಗಳು ಆಗಿದ್ದು ಅಭಿವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಒಳ ಗೊಂಡಿದೆ. ಮಾನವ ಹಕ್ಕುಗಳು ರೋಮನ್ ನಾಗರೀಕತೆಯ ಕಾಲದಲ್ಲೇ ಇದ್ದಿತು. ಆಗ ಇದನ್ನು **ನೈಸರ್ಗಿಕ ಹಕ್ಕುಗಳು** ಎಂದು ಕರೆಯಲಾಗುತ್ತಿತ್ತು. ಇವು ಸ್ಪಷ್ಟ ರೂಪು ಪಡೆದುಕೊಂಡಿದ್ದು 1215ರ **ಮ್ಯಾಗ್ನ ಕಾರ್ಟ** ಮೂಲಕ ಇಂಗ್ಲೆಂಡಿನ ಅರಸರು ಇದನ್ನು **ಕಾನೂನು ಬದ್ಧ ಹಕ್ಕುಗಳು** ಎಂದು ಘೋಷಿಸಿದರು. ಎಲ್ಲಾ ಮಾನವ ಜೀವಿಗಳು ಸ್ವತಂತ್ರವಾಗಿ ಜನಿಸಿವೆ ಆದ್ದರಿಂದ ಗೌರವ ಮತ್ತು ಹಕ್ಕುಗಳು ಎಲ್ಲರಿಗೂ ಸಮಾನ ವಾಗಿ ಸೇರುತ್ತವೆ. ಎಲ್ಲರೂ ಪರಸ್ಪರ ಭ್ರಾತೃತ್ವ ಭಾವದಿಂದ ಇರಬೇಕು ಎಂಬುದು ಇದರ ಸಾರಾಂಶ ಆಗಿದ್ದಿತು.

## ಮಾನವ ಹಕ್ಕುಗಳು ಸ್ವರೂಪ:

ಇಂದು ಮಾನವ ಹಕ್ಕುಗಳ ಕುರಿತು ಜಾಗತಿಕವಾಗಿ ಅತ್ಯಂತ ವ್ಯಾಪಕ ಮಾನ್ಯತೆ ಇದೆ. ಇವುಗಳನ್ನು ಆಯಾ ದೇಶದ ಸಂಸ್ಕೃತಿ, ಪರಂಪರೆ, ಸಾಮಾಜಿಕ ಒಪ್ಪಂದಗಳು, ನ್ಯಾಯ ವಿತರಣೆ ಇವುಗಳಿಂದ ಮೌಲ್ಯೀಕರಿಸಲಾಗುತ್ತದೆ. ಕೆಲವು ಧೇಶಗಳಲ್ಲಿ ರಾಜಕೀಯ ಅಧಿಕಾರ, ಸಂಪತ್ತು ಮತ್ತು ಬಲಾಢ್ಯತೆಯನ್ನು ಪಡೆಯಲು ವೈಯುಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಮಾನವ ಹಕ್ಕುಗಳು ಪ್ರತಿನಿಧಿತವಾಗುತ್ತದೆ. ಮಾನವ ಹಕ್ಕುಗಳ ಮೇಲೆ ಪರಿಸರದ ಸನ್ನಿವೇಶಗಳು, ವಿವಿಧ ಜಾಗತಿಕ ದೃಷ್ಟಿಕೋನಗಳು, ಪರಸ್ಪರ ಅವಲಂಬಿತ ವ್ಯವಸ್ಥೆಗಳು ಪ್ರಭಾವ ಬೀರುತ್ತದೆ **ಮಾನವ ಹಕ್ಕೋತ್ತಾಯ** ಸಮರ್ಥನೀಯ ಮತ್ತು ಅಪೇಕ್ಷಣೀಯ ಸಂಗತಿ ಆಗಿದೆ. ಕಾನೂನು ಮತ್ತು ದೇಶದ ನೈತಿಕ ವ್ಯವಸ್ಥೆಯಲ್ಲಿ ಮಾನವ ಹಕ್ಕುಗಳು ಪಾಲ್ಗೊಂಡಿವೆ.

## ಮಾನವ ಹಕ್ಕುಗಳು ಮತ್ತು ವಿಶ್ವ ಸಂಸ್ಥೆ:

ಎರಡನೇ ಮಹಾ ಯುದ್ಧದ ಸಮಯದಲ್ಲಿ ಮಾನವ ಜನಾಂಗದ ಮೇಲೆ ಉಂಟಾದ ಅಮಾನುಷ ಭೀಕರತೆಯ ಪರಿಣಾಮಗಳನ್ನು ಅರಿತ ಜಗತ್ತಿನ ಬಲಾಢ್ಯ ದೇಶಗಳ ನಾಯಕರು ಜಾಗತಿಕ ಮಟ್ಟದ ಮಾನವ ಹಕ್ಕುಗಳ ಸಂರಕ್ಷಣೆಗೆಂದೆ **ವಿಶ್ವ ಸಂಸ್ಥೆ**ಯನ್ನು ಸ್ಥಾಪಿಸಿದರು. ಇದು ಡಿಸೆಂಬರ್ 10ರಂದು **ಮಾನವ ಹಕ್ಕುಗಳ ವಿಶ್ವ ಘೋಷಣೆ**ಯನ್ನು ಹೊರಡಿಸಿತು. ಆದರೆ ಕಾನೂನಿನ ದೃಷ್ಟಿಯಿಂದ ಈ ಘೋಷಣೆ ಒತ್ತಾಯ ಪೂರ್ವಕವಾಗಿರಲಿಲ ಇದು ಮಾನವರ ಮೂಲಭೂತ ಪೌರ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಪ್ರವರ್ತಿಸಬೇಕೆಂದು ತನ್ನ ಸದಸ್ಯ ದೇಶಗಳನ್ನು ವಿನಂತಿಸಿಕೊಂಡಿತು. ಈ ಮೂಲಕ ಜಗತ್ತಿನಲ್ಲಿ ಸಮಾನತೆ ನ್ಯಾಯ ಸ್ವಾತಂತ್ರ್ಯ ಮತ್ತು ವಿಶ್ವ ಶಾಂತಿಯನ್ನು ಸ್ಥಾಪಿಸುವುದು ಇದರ ಮುಖ್ಯ ಉದ್ದೇಶವಾಗಿದ್ದಿತು. ಇದರಿಂದ ಸರ್ಕಾರದ ವರ್ತನೆಗಳನ್ನು ಮಿತಿಗೊಳಿಸಲು ಮತ್ತು ಸರ್ಕಾರಗಳು ತಮ್ಮ ಪೌರರ ಹಕ್ಕು ಕರ್ತವ್ಯದ ಸಿಧ್ದಾಂತವನ್ನು ಅನುಸರಿಸುವಂತೆ ಮಾಡುವ ಪ್ರಥಮ ಕಾನೂನು ಇದಾಯಿತು. ಇದು ಮಾನವ ಹಕ್ಕುಗಳ ಪಟ್ಟಿಯನ್ನು ಹೀಗೆ ಅರ್ಥೈಸುತ್ತದೆ;

1. ಅಭಿವ್ಯಕ್ತಿ ಹಕ್ಕು
2. ಆರೋಗ್ಯಕರ ಜೀವನ ಮಟ್ಟ ನಡೆಸುವ ಹಕ್ಕು
3. ಕಾನೂನು ಸಮಾನತೆ ಹಕ್ಕು
4. ಸ್ವಂತ ಆಸ್ತಿ ಹಕ್ಕು
5. ಧಾರ್ಮಿಕ ಹಕ್ಕು
6. ಕಾರ್ಮಿಕ ಸಂಘಗಳ ರಚನೆ ಮಾಡುವ ಮತ್ತು ಸೇರುವ ಹಕ್ಕು
7. ವಿರಾಮದ ಹಕ್ಕು
8. ಆರ್ಥಿಕ ಹಕ್ಕು
9. ಸಾಂಸ್ಕೃತಿಕ ಹಕ್ಕು
10. ಸಂಪತ್ತಿನ ಹಕ್ಕು
11. ನಿಷ್ಪಕ್ಷಪಾತ ವಿಚಾರಣೆ ಹಕ್ಕು
12. ಶಾಂತಿಯ ಸಮಾವೇಶ ಹಕ್ಕು
13. ಬಂಧನದ ವಿರುದ್ಧ ರಕ್ಷಣೆ ಹಕ್ಕು
14. ಶೈಕ್ಷಣಿಕ ಹಕ್ಕು

## ಮಾನವ ಹಕ್ಕುಗಳು ಮತ್ತು ಹೆಲ್ಸಿಂಕಿ ಆದೇಶ:

ಮಾನವ ಹಕ್ಕುಗಳು ಮತ್ತು ಹೆಲ್ಸಿಂಕಿ ಆದೇಶ ಮಾನವ ಹಕ್ಕುಗಳು ಕುರಿತು ಹೆಚ್ಚು ಚಿಂತನೆಗಳು ನಡೆದವು ವಿಶ್ವಸಂಸ್ಥೆ ಮಾನವ ಹಕ್ಕು ಗಳನ್ನು ಹೊರತು ಪಡಿಸಿ ಹೊರಗಿನ ಮಾನವ ಹಕ್ಕುಗಳು ರಕ್ಷಿಸುವ ಕಾರ್ಯ ನಡೆಯಿತು. ಇದನ್ನು **ಹೆಲ್ಸಿಂಕಿ ಆದೇಶ** ಎಂದು ಕರೆಯಲಾಗುತ್ತದೆ. 1973ರ ಜುಲೈ 3 ರಂದು ಹೆಲ್ಸಿಂಕಿ (ಫಿನ್‌ಲ್ಯಾಂಡ್) ನಡೆಯಿತು ಇದರ ಮುಂದುವರೆದ ಸಮಾವೇಶವು 1975ರ ಆಗಸ್ಟ್ ಒಂದರಂದು **ಜಿನೀವಾ**ದಲ್ಲಿ ನಡೆಯಿತು ಇದರಲ್ಲಿ 35 ದೇಶಗಳು ಭಾಗವಹಿಸಿದ್ದವು ಇವುಗಳಲ್ಲಿ **ನ್ಯಾಟೋ ಒಪ್ಪಂದದ ದೇಶಗಳು, ವಾರ್ಸಾ ಒಪ್ಪಂದದ ದೇಶಗಳು, ತಟಸ್ಥ ದೇಶಗಳು** ಮತ್ತು **ಅಲಿಪ್ತ ದೇಶಗಳು** ಸೇರಿದ್ದವು. ಇವು ಮಾನವ ಹಕ್ಕುಗಳು ಎಂದರೆ ಮೂಲಭೂತವಾಗಿ ಮಾನವರ ಸ್ವಾತಂತ್ರ್ಯ ಸಮಾನತೆಯ ಹಕ್ಕುಗಳು ಆದ್ದರಿಂದ ಎಲ್ಲರೂ ಈ ಹಕ್ಕುಗಳನ್ನು ಗೌರವಿಸಬೇಕೆಂದು ತೀರ್ಮಾನಿಸಲಾಯಿತು.

## ಕರ್ನಾಟಕದಲ್ಲಿ ಮಾನವ ಹಕ್ಕುಗಳು ಮತ್ತು ಅವುಗಳ ಉಲ್ಲಂಘನೆ:

ಕರ್ನಾಟಕದಲ್ಲಿ ಮಾನವ ಹಕ್ಕುಗಳ ಆಯೋಗವು 1993ರ ಮಾನವ ಹಕ್ಕುಗಳ ಕಾಯಿದೆಯ ಅನುಸಾರ ಸ್ಥಾಪಿತವಾಗಿದೆ. ಇದು ಮಾನವನ ಹಕ್ಕುಗಳು ದುರುಪಯೋಗವಾಗದಂತೆ ಮಾನವ ಹಕ್ಕುಗಳು ರಕ್ಷಣೆಗಾಗಿ ಇರುವ ರಾಷ್ಟ್ರೀಯ ಮತ್ತು ರಾಜ್ಯದ ನಿಯಮಗಳನ್ನು ಉಲ್ಲಂಘಿಸದಂತೆ ಸಂರಕ್ಷಿಸುತ್ತದೆ. ಉದಾಹರಣೆಗೆ;

೧. ಕೆಲಸದ ಸ್ಥಳಗಳಲ್ಲಿ ಪುರುಷರು ಮತ್ತು ಮಹಿಳೆಯರನ್ನು ಸಮಾನರೆಂದು ಪರಿಗಣಿಸದೇ ಇರುವುದು
೨. ಮಹಿಳೆ ಉದ್ಯೋಗಿಗಳನ್ನು ಶೋಷಿಸುವುದು
೩. ರಾಜ್ಯದಲ್ಲಿರುವ ವಿವಿಧ ಧರ್ಮ ಮತ್ತು ಜನಾಂಗಗಳನ್ನು ಸಮಾನರೆಂದು ಪರಿಗಣಿಸದೇ ಇರುವುದು ಮತ್ತು ತಾರತಮ್ಯ ಮಾಡುವುದು
೪. ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಜನತೆಯ ಜೀವನ ಭದ್ರತೆಗೆ ಅಪಾಯ ತಂದೊಡ್ಡುವುದು
೫. ಜೀತದ ಆಳುಗಳಾಗಿ ಮಾರಾಟ ಮಾಡುವುದು
೬. ನ್ಯಾಯೋಚಿತ ವಿಚಾರಣೆಗೆ ಒಳಪಡಿಸದೆ ಒಬ್ಬ ವ್ಯಕ್ತಿಯನ್ನು ಬಂಧಿಸುವುದು ಅಥವಾ ವಿಚಾರಣೆ ನಡೆಸದೇ ಶಿಕ್ಷೆ ಕೊಡುವುದು
೭. ಪೌರರು ತಮ್ಮ ದೇಶ ಬಿಡುವುದಕ್ಕೆ ಪ್ರವೇಶಿಸುವುದಕ್ಕೆ ಅಡ್ಡಿ ವುಂಟುಮಾಡುವುದು
೮. ರಾಜ್ಯದಲ್ಲಿರುವ ಕಾರ್ಮಿಕ ಸಂಘವನ್ನು ಸೇರದಂತೆ ಕಾರ್ಮಿಕರನ್ನು ನಿರ್ಬಂಧಿಸುವುದು
೯. ದೌರ್ಜನ್ಯಕ್ಕೆ ಬಲಿಯಾದವರಿಗೆ ನ್ಯಾಯಯುತ ಪರಿಹಾರ ಕೊಡದೇ ಇರುವುದು
೧೦. ಧರ್ಮ /ಜನಾಂಗ ಆಧರಿಸಿ ಶಿಕ್ಷಣವನ್ನು ನಿರಾಕರಿಸುವುದು
೧೧. ಸಣ್ಣ ತಪ್ಪಿಗೆ ಕ್ರೂರ ಮತ್ತು ಅಮಾನವೀಯ ಶಿಕ್ಷೆ ಕೊಡುವುದು
೧೨. ಅಭಿವ್ಯಕ್ತಿ ಸ್ವಾತಂತ್ರ್ಯ ನಿರಾಕರಣೆ ಮಾಡುವುದು'
೧೩. ವೈಯುಕ್ತಿಕ ಬದುಕಿನಲ್ಲಿ ಹಸ್ತಕ್ಷೇಪ ಮಾಡುವಿಕೆ
೧೪. ಧಾರ್ಮಿಕ ಸ್ವಾತಂತ್ರ್ಯ ನಿರಾಕರಣೆ ಮಾಡುವುದು
೧೫. ಒಂದು ಜನಾಂಗವನ್ನು ಮಾನವ ಎಂದು ಪರಿಗಣಿಸದೇ ಇರುವುದು

## ಮಾನವ ಹಕ್ಕುಗಳ ಜಾಗೃತಿ ಮತ್ತು ಶಿಕ್ಷಣ ಸಂಸ್ಥೆಗಳ ಪಾತ್ರ

ಕರ್ನಾಟಕ ಸರ್ಕಾರವು ಶಾಲಾ ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಮಾನವ ಹಕ್ಕುಗಳು ಕುರಿತು ಪ್ರಾಥಮಿಕ ಮಾಹಿತಿ ನೀಡಲು ಪಠ್ಯ ಕ್ರಮಗಳನ್ನು ಹೆಚ್ಚು ವ್ಯಾಪಕ ಗೊಳಿಸುವ ಕ್ರಮವನ್ನು ಕೈಗೊಂಡಿವೆ. ಶಿಕ್ಷಣ ಸಂಸ್ಥೆಗಳು ಈ ಕುರಿತು ಇನ್ನೂ ಹೆಚ್ಚು ಜಾಗೃತಿಯನ್ನು ಪ್ರದರ್ಶಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಕಲಿಕೆಯ ಹಂತದಲ್ಲಿಯೇ ಮಾನವ ಹಕ್ಕುಗಳ ಕುರಿತು ಸಂಪೂರ್ಣ ಮಾಹಿತಿ ದೊರೆಯುವಂತಾಗ ಬೇಕು ಈ ನಿಟ್ಟಿನಲ್ಲಿ ಪಠ್ಯ ಮತ್ತು ಪಠ್ಯೇತರ ಕಾರ್ಯ ಚಟುವಟಿಕೆಗಳನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳು ಏಕ ರೂಪವಾಗಿ' ಅನುಸರಿಸುವಂತಾಗ ಬೇಕು ಎಂಬ ಉದ್ದೇಶದಿಂದ ಕರ್ನಾಟಕ ಸರ್ಕಾರ ಮಾನವ ಹಕ್ಕುಗಳ ಸಂರಕ್ಷಣೆಗೆ ಹಲವು ಕ್ರಮಗಳನ್ನು ತೆಗೆದು ಕೊಂಡಿದೆ.

ಮಾನವ ಹಕ್ಕುಗಳ ಉಲ್ಲಂಘನೆ ತಡೆಯಲು ಶಿಕ್ಷಣ, ಸಾಮಾಜಿಕ ಜಾಗೃತಿ ಮೂಡಿಸುವಿಕೆ, ಕಾನೂನು ಪಾಲನೆ ಮತ್ತು ಸಕ್ರಿಯ ನಾಗರೀಕ ಸಹ ಭಾಗಿತ್ವ, ಸಾಮುದಾಯಿಕ ಪಾಲ್ಗೊಳ್ಳುವಿಕೆ ಅತ್ಯಗತ್ಯ ಇದಕ್ಕಾಗಿ ಶೈಕ್ಷಣಿಕ ಸಂಸ್ಥೆಗಳ ಪಾತ್ರ ಬಹು ಪ್ರಮುಖವಾದದು. ಶಾಲಾ ಕಾಲೇಜುಗಳಲ್ಲಿ ತಾರತಮ್ಯ ರಹಿತ ವರ್ತನೆ, ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವುದು ಮತ್ತು ಸಕಾಲದಲ್ಲಿ ಕಾನೂನು ನೆರವು ಪಡೆಯುವುದು ಸೇರಿದಂತೆ ಕಲಿಕೆಯ ಹಂತದಲ್ಲಿಯೇ ಜಾಗೃತಿ ಹೆಚ್ಚು ಚಾಲನೆಗೊಳ್ಳಬೇಕು ಇದರಿಂದ ಸಾಮುದಾಯಿಕ ಹಂತದಲ್ಲಿಯೇ ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಬಹುದು ಎಂಬುದು ಕರ್ನಾಟಕ ಸರ್ಕಾರದ ಅಭಿಪ್ರಾಯವಾಗಿದೆ.

ಮಾನವ ಹಕ್ಕುಗಳ ಉಲ್ಲಂಘನೆ ಶಾಲಾ ಕಾಲೇಜುಗಳಲ್ಲಿ ಬಹು ಪ್ರಾಧಾನ್ಯವಾಗಿ ಕಂಡು ಬರುತ್ತದೆ. ವಿದ್ಯಾರ್ಥಿಗಳ ಮಧ್ಯೆ ತಾರತಮ್ಯ ಮಾಡುವುದು, ಸಣ್ಣ ತಪ್ಪುಗಳಿಗೆ ಉಗ್ರ ಶಿಕ್ಷೆಗೆ ಒಳಪಡಿಸುವುದು, ಪೋಷಕರಿಗೆ ಪದೇ ಪದೇ ದೂರುವುದು, ಕಾರಣವಿಲ್ಲದೇ ದಾಖಲಾತಿ ರದ್ದು ಮಾಡುವುದು, ಫಲಿತಾಂಶ ತಡೆ ಹಿಡಿಯುವುದು ಇತ್ಯಾದಿ. ಇನ್ನು ಕೆಲವು ಶಾಲಾ ಕಾಲೇಜುಗಳಲ್ಲಿ ಅತಿಯಾದ ಶುಲ್ಕ ವಸೂಲಿ, ಕ್ಯಾಪಿಟೇಶನ್, ಹೆಸರಿನಲ್ಲಿ ಶೋಷಣೆಯಾಗುತ್ತದೆ. ಇನ್ನು ಕೆಲವು ಶಾಲಾ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳು ಲೈಂಗಿಕ ಶೋಷಣೆಗೆ ಒಳಗಾಗುತ್ತಾರೆ ಆದರೆ ಅವರ ಮೇಲೆ ನಡೆದ ದೌರ್ಜನ್ಯವನ್ನು ಅವರು ಉನ್ನತ ಮಟ್ಟದವರಿಗೆ ತಲುಪಿಸಿದರೂ ಶಾಲಾ ಆಡಳಿತ ಮಂಡಲಿಗಳು ತಪಿತಸ್ಥರ ವಿರುದ್ದ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಪೋಷಕರು ಸಹ ತಮ್ಮ ಮಕ್ಕಳಿಗೆ ಆದ ಅನ್ಯಾಯವನ್ನು ಮೌನವಾಗಿ ಸಹಿಸಿಕೊಳ್ಳುತ್ತಾರೆ ಅಥವಾ ಇಂತಹ ಪ್ರಕರಣಗಳು ವರದಿಯಾಗದೇ ಹೋಗುತ್ತವೆ. ಇನ್ನು ಕೆಲವು ಶಾಲಾ ಕಾಲೇಜುಗಳಲ್ಲಿ ಬಾಲಕಿಯರ ಪ್ರತ್ಯೇಕ ಶೌಚಾಲಯಗಳಾಗಲಿ, ವಿರಾಮ ಕೊಠಡಿಗಳಾಗಲಿ ಇರುವುದಿಲ್ಲ. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಲು ಶಾಲಾ ಅಭಿವೃದ್ಧಿ ಮಂಡಲಿಗಳು ಇರುತ್ತವೆಯಾದರೂ

ಅವು ಶಾಲಾ ನಿರ್ವಹಣೆಯ ಹೊಣೇ ಹೊತ್ತ ಮಾಲೀಕರ ಕೈಗೊಂಬೆಗಳಾಗಿರುತ್ತವೆ. ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗೆ ಹೆದರಿ ಇಂತಹ ಪ್ರಕರಣಗಳು ವರದಿಯಾಗದೇ ಮರೆತೆ ಹೋಗುತ್ತವೆ.

## ಸರ್ಕಾರೇತರ ಸಂಘಟನೆಗಳ ಪಾತ್ರ:

ಕರ್ನಾಟಕ ರಾಜ್ಯ ಸ್ವಯಂ ಸೇವಕರ ಸಂಘ ಈ ಸಂಘಟನೆಗಳು ಶೋಷಿತ ಸಮುದಾಯಗಳು ಮಕ್ಕಳು ಕಾರ್ಮಿಕರು ಮತ್ತು ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುತ್ತಿವೆ. ಕೆಲವು ಸಂಘಟನೆಗಳು ಮಾನವ ಹಕ್ಕುಗಳ ರಕ್ಷಣೆ್ಗಾಗಿಯೇ ಹುಟ್ಟಿ ಕೊಂಡರೂ ಅವುಗಳ ಕಾರ್ಯ ವಿಧಾನ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿದ್ದಾಗ ಅದಕ್ಕೆ ನೀಡಲಾಗುತ್ತಿರುವ ಅನುದಾನವನ್ನು ನಿಲ್ಲಿಸುವುದು, ದ'ೂಷಿತ ಅಧಿಕಾರಿಗಳನ್ನು ಅಮಾನತು ಮಾಡುವುದು, ಸಂಘಟನೆಯನ್ನು ಕಪ್ಪು ಪಟ್ಟಿಗೆ ಸೇರಿಸುವುದು ಮೊದಲಾದ ಕಾನೂನು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಆದರೆ ಕೆಲವು ಸರ್ಕಾರೇತರ ಎನ್.ಜಿ.ಓ. ಗಳು ರಾಜಕೀಯ ಪಕ್ಷಗಳ ಬೆಂಬಲ ಪಡೆದು ಇವುಗಳ ಮುಖವಾಣಿಯಂತೆ ವರ್ತಿಸುತ್ತವೆ. ಜಾತಿಗಳನ್ನು ಎತ್ತಿ ಕಟ್ಟುವುದು, ದೋಷ ಪೂರಿತ ವಿಷಯಗಳನ್ನು ಮನಬಂದಂತೆ ಹರಡುವುದು, ಧರ್ಮ ಧರ್ಮಗಳ ನಡುವಿನ ಆಚರಣೆಗಳನ್ನು ಕುರಿತು ಕೆರಳುವಂತೆ ಮಾತನಾಡುವುದೂ ಸೇರಿದಂತೆ ಸಾಮಾಜಿಕ ಜಾಲ ತಾಣಗಳ ಮೂಲಕ ಮಾನವ ಹಕ್ಕುಗಳನ್ನು ಉಲ್ಲಂಘಿಸುವುದು ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕಲು ಹಲವು ಕಾನೂನು ಕ್ರಮಗಳು ಇವೆಯಾದರೂ ಅದನ್ನು ತಮ್ಮ ರಕ್ಷಣೆಗಾಗಿ ಬಳಸಿಕೊಳ್ಳುವ ಜಾಗೃತಿ ಸಮುದಾಯಗಳಲ್ಲಿ ಇಲ್ಲದೇ ಇರುವುದು ದುರಂತದ ಸಂಗತಿ.

## ಶೈಕ್ಷಣಿಕ ಸಂಸ್ಥೆಗಳು ಮತ್ತು ಅಂತರ ರಾಷ್ಟ್ರೀಯ ಮಾನವ ಹಕ್ಕುಗಳ ದಿನ ಆಚರಣೆ:

ಪ್ರತಿ ವರ್ಷ **ಡಿಸೆಂಬರ್ 10 ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನವಾಗಿ** ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಆಚರಿಸುತ್ತವೆ. ವಿದ್ಯಾರ್ಥಿಗಳು ಮಾನವ ಹಕ್ಕುಗಳನ್ನು ಕುರಿತು ಅರಿಯಲು ಮತ್ತು ಪ್ರತಿಪಾದಿಸಲು ಒಂದು ದಿನವನ್ನು ಆಚರಿಸುತ್ತವೆ. ಉಜ್ವಲ ಭವಿಷ್ಯಕ್ಕಾಗಿ ಸಾಮೂಹಿಕ ಜಾಗೃತಿ ಮೂಡಿಸಲು ಈ ದಿನವನ್ನು ವಿದ್ಯಾರ್ಥಿಗಳನ್ನು ಮಾನವ ಹಕ್ಕುಗಳನ್ನು ಕುರಿತು ಅರಿಯಲು ಶೈಕ್ಷಣಿಕ ಸಂಸ್ಥೆಗಳು ಆಚರಿಸುತ್ತವೆ. ಮಕ್ಕಳಿಗೆ ಕಲಿಕೆಯ ಹಂತದಲ್ಲಿಯೇ **ಮಾನವ ಹಕ್ಕುಗಳ ಕುರಿತು ಜಾಗೃತಿ** ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಾಗುತ್ತದೆ. ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ಬರಹ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆಗಳ ಜೊತೆಗೆ ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿವಿಧ ರೀತಿಯ ವಿಚಾರ ಸಂಕಿರಣಗಳು ಮತ್ತು ಕ್ರಿಯಾತ್ಮಕ ಕಾರ್ಯ ಚಟುವಟಿಕೆಗಳನ್ನು ಹಾಕಿ ಕೊಳ್ಳಲಾಗುತ್ತದೆ. ಈ ಎಲ್ಲ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಲ್ಲಿ ಮಾನವ ಹಕ್ಕುಗಳ ಅರ್ಥ, ವ್ಯಾಪ್ತಿ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಸಮಯದಲ್ಲಿ ಅನುಸರಿಸಬೇಕಾದ ಪ್ರಾಥಮಿಕ ಕ್ರಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತದೆ.

## ಮಾನವ ಹಕ್ಕುಗಳ ಅರಿವು ಕುರಿತು ಶೈಕ್ಷಣಿಕ ಒಡಂಬಡಿಕೆಗಳ ಪಾತ್ರ:

ಕರ್ನಾಟಕದಲ್ಲಿ ಕೆಲವು ಶೈಕ್ಷಣಿಕ ಸಂಸ್ಥೆಗಳು ಸರ್ಕಾರೇತರ ಮಾನವ ಹಕ್ಕುಗಳ ಸಂರಕ್ಷಣೆ ಕುರಿತಂತೆ ಇರುವ ಸಂಘ ಸಂಸ್ಥೆಗಳ ಜೊತೆ, ವಿಶ್ವ ವಿದ್ಯಾಲಯಗಳ ಜೊತೆ **ಶೈಕ್ಷಣಿಕ ಒಡಂಬಡಿಕೆ**ಯನ್ನು ಮಾಡಿಕೊಂಡು ಅವರ ಜೊತೆಯಲ್ಲೇ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾರ್ಗದರ್ಶನ ಪಡೆಯಲು ಅವಕಾಶ ಕಲ್ಪಿಸುತ್ತವೆ. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಮಿತಿ, **ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಂಘಟನೆ ಬೆಂಗಳೂರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ಮಹಿಳಾ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಸ್ವ ಸಹಾಯ ಸಂಘ**ಗಳ ಸಂಘಟಣೆಗಳು ಸೇರಿದಂತೆ ಇತ್ಯಾದಿ ಸಂಘ ಸಂಸ್ಥೆಗಳು ಮಾನವ ಹಕ್ಕುಗಳ ಕುರಿತು ಸೂಕ್ತ ಮಾಹಿತಿಯನ್ನು ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತವೆ. ಇದಕ್ಕೆ ಶೈಕ್ಷಣಿಕ ಒಡಂಬಡಿಕೆಗಳು ಸೂಕ್ತ ನೆಲೆ ಒದಗಿಸುತ್ತವೆ.

## ಮಾನವ ಹಕ್ಕುಗಳ ಅರಿವು ಕುರಿತು ಉನ್ನತ ಶಿಕ್ಷಣದ ಸಂಸ್ಥೆಗಳ ಪಾತ್ರ:

ಮಾನವ ಹಕ್ಕುಗಳ ಅರಿವು ಕುರಿತು ಉನ್ನತ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಜವಾಬ್ದಾರಿಯನ್ನು ಹೊಂದಿವೆ. ಪದವಿ ಕಲಿಕೆಯ ಜೊತೆಯಲ್ಲೇ **ವಿಶೇಷ ಸರ್ಟಿಫಿಕೇಟ್ ಕೋರ್ಸು**ಗಳನ್ನು ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು ನಡೆಸುತ್ತವೆ. ಮೂರು ತಿಂಗಳು, ಆರು ತಿಂಗಳು ಅಥವಾ ಒಂದು ವರ್ಷ ಅಲ್ಪಾವಧಿಯ ಕೋರ್ಸುಗಳನ್ನು ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು ನಡೆಸುತ್ತವೆ. ಈ ಮೂಲಕ ವಿದ್ಯಾರ್ಥಿಗಳಿಗೆ ಮಾನವ ಹಕ್ಕುಗಳ ಕುರಿತು ಮಾಗದರ್ಶನ ನೀಡಿ ಪ್ರಮಾಣೀಕರಿಸಿದ ಸರ್ಟಿಫಿಕೇಟುಗಳನ್ನು ನೀಡುತ್ತವೆ. ಇದು ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಮಾನವ ಹಕ್ಕುಗಳ ಕುರಿತು ಇತರ'ರಿಗೆ ಜಾಗೃತಿ ಮೂಡಿಸಲು ಹಾಗೂ ಮಾನವ ಹಕ್ಕುಗಳ ಆಪ್ತ ಸಮಾಲೋಚಕರಾಗಿ ಕಾರ್ಯ ನಿರ್ವಹಿಸಲು ನೆರವಾಗುತ್ತವೆ. ಕೆಲವು ಶೈಕ್ಷಣಿಕ ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕಾನೂನು ಅರಿವು ಮತ್ತು ಮಾನವ ಹಕ್ಕುಗಳ ಅರಿವು ಶಿಬಿರಗಳನ್ನು ನಡೆಸಲು ಇಂತಹ ವಿದ್ಯಾರ್ಥಿಗಳನ್ನು ಬಳಸಿ ಕೊಳ್ಳುತ್ತವೆ. ಅಲ್ಲದೇ ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳು ಪ್ರತ್ಯೇಕ ಮಾನವ ಹಕ್ಕುಗಳ ವಿಷಯದಲ್ಲಿಯೇ ಪದವಿ ಗಳಿಸಿಕೊಳ್ಳುವ, ಸಂಶೋಧನೆ ನಡೆಸುವ ಮತ್ತು ಉನ್ನತ ಪದವಿ ಗಳಿಸಿ ಕೊಳ್ಳುವ ಅವಕಾಶ ಕೊಡುತ್ತವೆ. ಕರ್ನಾಟಕ

ರಾಜ್ಯ ಮುಕ್ತ ವಿಶ್ವ ವಿದ್ಯಾಲಯವೂ ಸಹ ಮಾನವ ಹಕ್ಕುಗಳ ವಿಷಯದಲ್ಲಿ ಹಲವು ವಿಧಧ ಕಲಿಕೆಗೆ ಮುಕ್ತ ಅವಕಾಶ ನೀಡಿದೆ. ಶಾಲಾ ಪಠ್ಯ ಕ್ರಮದಲ್ಲಿಯೂ ಮಾನವ ಹಕ್ಕುಗಳ ರಕ್ಷಣೆಯ ವಿಷಯ ಸೇರ್ಪಡೆ ಗೊಂಡಿದೆ. ಇದು ಮಾನವ ಹಕ್ಕುಗಳ ರಕ್ಷಣೆ ಕುರಿತು ಶೈಕ್ಷಣಿಕ ಸಾಂಸ್ಥಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ.

## ಮಾನವ ಹಕ್ಕುಗಳ ಜಾಗೃತಿ ಮತ್ತು ಕಾನೂನು ಅರಿವು ಸಂಸ್ಥೆಗಳ ಪಾತ್ರ:

ಕರ್ನಾಟಕದಲ್ಲಿ ಅತೀ ಹೆಚ್ಚು ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಬೆಂಗಳೂರಿನಲ್ಲಿ ದಾಖಲಾಗುತ್ತವೆ. ವಿಶೇಷವಾಗಿ ಕರ್ನಾಟಕದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಕೌಟುಂಬಿಕ ವಲಯದಿಂದಲೇ ದಾಖಲಾಗುತ್ತವೆ. ಕೌಟುಂಬಿಕ ಹಿಂಸಾಚಾರ ತಡೆ ಕಾಯಿದೆ ಮತ್ತು ಇತರೆ ಕಾನೂನುಗಳ ಅಡಿಯಲ್ಲಿ ಶೋಷಣೆಗೆ ಮಹಿಳೆಯರು ಒಳಾಗಾದಾಗ ರಕ್ಷಣೆಗಾಗಿ ದೂರು ನೀಡಲು **ವಿಶೇಷ ಮಾನವ ಹಕ್ಕು ರಕ್ಷಣಾ ಸಮಿ**ತಿಗಳನ್ನು ರಚಿಸಲಾಗಿದೆ. ಕರ್ನಾಟಕ ಸರ್ಕಾರ ಮಾನವ ಹಕ್ಕುಗಳ ರಕ್ಷಣಾ ಅಧಿಕಾರಿಗಳನ್ನೂ ಸಹ ನೇಮಿಸಲಾಗಿದೆ. ಆದರೆ ಈ ಕುರಿತು ಸಾರ್ವಜನಿಕರಿಗೆ ವಿಶೇಷವಾಗಿ ಹೆಚ್ಚಿನ ಮಾಹಿತಿ ಇಲ್ಲ ಮಹಿಳಾ ಶೋಷಣೆ ತಡೆ ಮತ್ತು ಮಹಿಳಾ ಸಬಲೀಕರಣ ವಿಷಯಗಳ ಕುರಿತು ರಚಿಸಲಾಗಿರುವ ಅನೇಕ ಕಾನೂನುಗಳ ಕುರಿತು ಉಚಿತ ಕಾನೂನು ಅರಿವು ನೀಡಲಾಗುತ್ತಿದೆ, ಆದರೆ ಈ ಪ್ರಕ್ರಿಯೆ ಗ್ರಾಮೀಣ ಮಟ್ಟದಲ್ಲಿ ಚುರುಕು ಪಡೆದು ಕೊಳ್ಳಬೇಕು ಎಂಬ ವಾದವೂ ಇದೆ. ಕೌಟುಂಬಿಕ ಸ್ತರಗಳಲ್ಲಿ ಮಾನವ ಹಕ್ಕುಗಳು ಹೆಚ್ಚು ಉಲ್ಲಂಘನೆ ಆಗುತ್ತಿರುವುದು ಅತ್ಯಂತ ಕಳವಳಕಾರಿ ಎಂದು ಕರ್ನಾಟಕ ಹೈ ಕೋರ್ಟ್ ಅಭಿಪ್ರಾಯ ಪಟ್ಟಿದೆ.

## ಸಾಂಸ್ಥಿಕ ಭಾದ್ಯತೆಗಳು:

ವಿದ್ಯಾ ಸಂಸ್ಥೆಗಳು ಕೆಲವು ಸಾಂಸ್ಥಿಕ ಭಾದ್ಯತೆಗಳನ್ನು ಹೊಂದಿದ್ದು ಮಾನವ ಹಕ್ಕುಗಳನ್ನು ಸಾಮಾಜಿಕವಾಗಿ ಸಂರಕ್ಷಿಸುವ ಸ್ಪಷ್ಟ ನಿಲುವುಗಳನ್ನು ಪ್ರದರ್ಶಿಸಬೇಕಿದೆ. ಮಾನವ ಹಕ್ಕುಗಳು ಕೇವಲ ಶೋಷಣೆಗೆ ಒಳಪಟ್ಟವರು ತಿಳಿದು ಕೊಳ್ಳುವ ವಿಷಯ ಎಂಬ ಸೀಮಿತ ಅರಿವಿನ ಬದಲಾಗಿ ಜಾಗೃತ ಅರಿವು ಸಾಮುದಾಯಿಕವಾಗಿ ಎಲ್ಲರನ್ನು ತಲುಪಬೇಕು ಎಂದು ಎಲ್ಲಾ ಶಿಕ್ಷಣ ಸಂಸ್ಥೆಗಳು ಅರಿತು ಕೊಳ್ಳ ಬೇಕು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎಂಬ ಮಾತಿನಂತೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಎಲ್ಲ ವಿದ್ಯಾ ಸಂಸ್ಥೆಗಳ ಸಾಂಸ್ಥಿಕ ಭಾದ್ಯತೆಯಾಗಿರುತ್ತದೆ.

## ಉಪ ಸಂಹಾರ:

ಮಾನವ ಹಕ್ಕುಗಳ ಬಗ್ಗೆ ಉಲ್ಲಂಘನೆ ಯಾದಾಗ ಪರಿಹಾರ ರಾಷ್ಟ್ರೀಯ ನಿಧಿಯಿಂದ ಪರಿಹಾರ ಕೋರ ಬಹುದು ಎಂಬುದು ಬಹಳಷ್ಟು ಜನರಿಗೆ ತಿಳಿದಿರುವುದಿಲ್ಲ. ಕರ್ನಾಟಕದಲ್ಲಿ ಮಾನವ ಹಕ್ಕುಗಳ ರಕ್ಷಣೆಗಾಗಿಯೇ ಇರುವ ಸರ್ಕಾರೇತರ ಸಂಘ ಸಂಸ್ಥೆಗಳು ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟಲು ಬಹಳಷ್ಟು ಸಮಾಜಮುಖಿ ಕೆಲಸಗಳನ್ನು ಮಾಡುತ್ತಿವೆ. ಸಮುದಾಯದಲ್ಲಿ ಈ ಕುರಿತು ಸಾರ್ವಜನಿಕ ಜಾಗೃತಿ ತರುವುದು ಈ ಸಂಘ ಸಂಸ್ಥೆಗಳ ಮೂಲ ಉದ್ದೇಶ ಆದರೆ ಸಮುದಾಯದ ಎಲ್ಲಾ ಭಾಗೀದಾರರು ಇದರಲ್ಲಿ ಪಾಲ್ಗೊಳ್ಳುವುದೂ ಸಹ ಅಷ್ಟೆ ಮಹತ್ವ ಗಳಿಸಿಕೊಳ್ಳುತ್ತದೆ. ಆದರೆ ಶೈಕ್ಷಣಿಕ ಸಂಸ್ಥೆಗಳು ಹೆಚ್ಚು ಸಾಂಸ್ಥಿಕವಾಗಿ ಕ್ರಮಕೈಗೊಳ್ಳುವ ಮೂಲಕ ಸರ್ಕಾರದ ಜೊತೆ ಕೈ ಜೋಡಿಸಬೇಕು.

## ಪರಾಮರ್ಶನ ಗ್ರಂಥಗಳು:


1. ಆನಂದ್. ಟಿ – ದಲಿತರು–ಭೂತ, ವರ್ತಮಾನ ಮತ್ತು ಭವಿಷ್ಯ, 2016
2. ಗೀತಾ ಕೃಷ್ಣಮೂರ್ತಿ – ದಲಿತ ಸಂಘರ್ಷ ಸಮಿತಿಯ ಸವಾಲುಗಳು – **ಪ್ರಜಾವಾಣಿ ಪತ್ರಿಕೆ** 23 ಜನವರಿ 2024
3. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವಾರ್ಷಿಕ ವರದಿ, ಭಾರತ ಸರ್ಕಾರ, ನವ ದೆಹಲಿ, ಅಂಕಿ ಅಂಶಗಳು, 2025.
4. ಮಾನವ ಹಕ್ಕುಗಳ ಕಾಯಿದೆ, ಭಾರತ ಸರ್ಕಾರ, ನವ ದೆಹಲಿ, ಅಂಕಿ ಅಂಶಗಳು, 2025.
5. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ಭಾರತ ಸರ್ಕಾರ, ನವ ದೆಹಲಿ, ಅಂಕಿ ಅಂಶಗಳು, 2024.
6. ವರದಿ – ಕರ್ನಾಟಕ ಮಾನವ ಹಕ್ಕುಗಳ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳುರು
7. ವರದಿ – ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಅಧಿಕೃತ ಜಾಲ ತಾಣ 2023–24.
8. ವರದಿ– ಮಕ್ಕಳ ಹಕ್ಕುಗಳ ಸಂರಕ್ಷಣೆ ರಾಷ್ಟ್ರೀಯ ಆಯೋಗ 2022–24
9. ವರದಿ – ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆ, 2023–24
10. ವರದಿ – ಜನಗಣತಿ 2011 ಭಾರತ ಸರ್ಕಾರ ಪ್ರಕಟಿತ 2012
11. ವರದಿ – ಇಂಡಿಯನ್ ಲೇಬರ್ ಇಂಡೆಕ್ಸ್ ರಿಪೋರ್ಟ ವರದಿ 2015
12. ವರದಿ – ಮಾನವ ಸಂಪನ್ಮೂಲ ಇಲಾಖೆ ಭಾರತ ಸರ್ಕಾರ ನವ ದೆಹಲಿ, 2024